ಬ) ಆ ತಾಲೂಕಿಗೆ ಅಷ್ಟು ಮುಖ್ಯ ಇಂಜಿನಿಯರ್ ಹುದ್ದೆಗಳ ಅವಶ್ಯಕತೆ ಇದೆಯೇ ?

ಇ) ಇದ್ದಲ್ಲಿ, ಅವರುಗಳಿಗೆ ಸಮರ್ಪಕವಾಗಿ ಕಾರ್ಯಭಾರವನ್ನು ಹಂಚಲಾಗಿದೆಯೇ?

ಈ) ಅಷ್ಟೊಂದು ಮುಖ್ಯ ಇಂಜನಿಯರ್‌ಗಳು ಇದ್ದರೂ ಕೂಡ ತಾಲೂಕಿನಲ್ಲಿ ಕಾರ್ಯದಕ್ಷತೆಯು ನಿರೀಕ್ಷಿತ ಮಟ್ಟದಲ್ಲಿ ಇರದೇ ಇರಲು ಕಾರಣಗಳೇನು?

ಉ) ಮುಖ್ಯ ಇಂಜನಿಯರ್‌ಗಳ ಹುದ್ದೆಗಳಲ್ಲಿ ಮೀಸಲಾತಿಯನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗಿದೆಯೇ ?

ಊ) ಇಲ್ಲವಾದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) 03

ಆ) ಇದೆ

ಇ) ಹೌದು

ಈ) ಅವರ ಕಾರ್ಯದಕ್ಷತೆಯು ನಿರೀಕ್ಷಿತ ಮಟ್ಟ ತಲುಪಿಲ್ಲವೆಂಬ ಬಗ್ಗೆ ಸರ್ಕಾರವು ಗಮನಕ್ಕೆ ಬಂದಿರುವುದಿಲ್ಲ.

ಉ) ಮೀಸಲಾತಿ ನಿಯಮಾವಳಿಯು ಮುಖ್ಯ ಇಂಜನಿಯರ್ ವೃಂದಕ್ಕೆ ಅನ್ವಯಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಕಲಘಟಗಿ ತಾಲ್ಲೂಕಿನಲ್ಲಿ ಸಾವಿಹಳ್ಳಿ ಮತ್ತು ಸೋಮನಕೊಪ್ಪ ನೀರಾವರಿ ಯೋಜನೆಗಳನ್ನು ಕುರಿತು

490 - ಶ್ರೀ ಪಿ.ಸಿ. ಸಿದ್ದನ ಗೌಡರ (ಕಲಘಟಗಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ತಾಲ್ಲೂಕು ಸಾವಿಹಳ್ಳಿ ಮತ್ತು ಸೋಮನಕೊಪ್ಪ ನೀರಾವರಿ ಯೋಜನೆಗಳಿಗೆ ಯಾವಾಗ ಮಂಜೂರಾತಿ ನೀಡಲಾಗಿದೆ?

ಆ) ಇದರಿಂದ ಒಟ್ಟು ಎಷ್ಟು ಎಕರೆಯ ಪ್ರದೇಶಕ್ಕೆ ನೀರಾವರಿ ಆಗುತ್ತದೆ?

ಇ) ಈ ಯೋಜನೆಗಳಿಗೆ ಬೇಕಾದಂಥ ಭೂಮಿಯನ್ನು ರೈತರುಗಳಿಂದ ಸ್ವಾಧೀನಪಡಿಸಿಕೊಳ್ಳಲಾಗಿದೆಯೇ ಹಾಗೂ ಇಲ್ಲಿಯವರೆಗೆ ಆ ನೀರಾವರಿ ಕಾಮಗಾರಿಗಳಿಗೆ ಎಷ್ಟು ಹಣ ವಿನಿಯೋಗಿಸಿದೆ?

ಈ) ಈ ಯೋಜನೆಯನ್ನು ಯಾವಾಗ ಮುಗಿಸಬೇಕಾಗಿತ್ತು ಹಾಗೂ ಇದು ವಿಳಂಬವಾಗಿರುವುದಕ್ಕೆ ಕಾರಣವೇನು?

ಡಾ|| ಆರ್.ವಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) 10.324 ಲಕ್ಷ ರೂ.ಗಳ ಅಂದಾಜುಪಟ್ಟಿಗೆ ಸರ್ಕಾರದಿಂದ ದಿನಾಂಕ 16-6-1973ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಪರಿಷ್ಕೃತ ಅಂದಾಜು 175 ಲಕ್ಷ ರೂ.ಗಳಿಗೆ ತಯಾರಿಸಲ್ಪಟ್ಟಿದ್ದು ತಾಂತ್ರಿಕ ಸಮಿತಿಯ ಪರಿಶೀಲನೆಯಲ್ಲಿದೆ.

ಆ) 668 ಎಕರೆ

ಇ) 173 ಎಕರೆ 5 ಗುಂಟೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಈ) 22.40 ಲಕ್ಷ ರೂ. ಇಲ್ಲಿಯವರೆಗೆ ವಿನಿಯೋಗಿಸಿದೆ.

ಆ) 1976-77ರಲ್ಲಿ ಮುಗಿಸಲಾಗಿತ್ತು. ಭೂ ಸ್ವಾಧೀನಕ್ಕೆ ರೈತರಿಂದ ಅಡ್ಡಿ ಮತ್ತು ತಾಂತ್ರಿಕ ಹಾಗೂ ವಿನ್ಯಾಸದ ಬದಲಾವಣೆಯಿಂದ ವಿಳಂಬವಾಗಿದೆ.

ಕಲಘಟಗಿ ತಾಲ್ಲೂಕಿನಲ್ಲಿ 33 ಕೆ.ವಿ. ವಿದ್ಯುತ್ ಸ್ಟೇಷನ್ ಪ್ರಾರಂಭದ ಬಗ್ಗೆ

492 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ತಾಲ್ಲೂಕು ಕರಣಕೊಪ್ಪದಲ್ಲಿ 33 ಕೆವಿ ವಿದ್ಯುತ್ ಸ್ಟೇಷನ್ನು ಪ್ರಾರಂಭ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಆ) ಆ ಗ್ರಾಮದಲ್ಲಿ ಸರಿಯಾಗಿ ವಿದ್ಯುಚ್ಛಕ್ತಿ ಪೂರೈಕೆಯಾಗದೇ ರೈತರಿಗೆ ತೊಂದರೆ ಆಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಅಲ್ಲಿ ವಿದ್ಯುತ್ ಸ್ಟೇಷನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಇಲ್ಲ

ಆ) ಪ್ರಸ್ತುತ ಈ ಗ್ರಾಮದಲ್ಲಿ ವಿದ್ಯುತ್ ಸರಬರಾಜು ಸಮರ್ಪಕವಾಗಿದೆ. ಇನ್ನೂ ಹೆಚ್ಚಿನ ಸಮರ್ಪಕ ರೀತಿಯಲ್ಲಿ ವಿದ್ಯುತ್ ಸರಬರಾಜು ಮಾಡಲು ಧಮ್ಮಾಪ್ಪನಲ್ಲಿರುವ 33:11 ಕೆವಿ ವಿದ್ಯುತ್ ಉಪಕೇಂದ್ರದಿಂದ ಒಂದು 11 ಕೆವಿ ಫೀಡರ್ನ್ನು ನಿರ್ಮಾಣ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ) ಪ್ರಶ್ನೆಯು 'ಆ' ಭಾಗಕ್ಕೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಕಲಘಟಗಿ ತಾಲ್ಲೂಕಿನ ಮದಿಕೆ ಹೊನ್ನಳ್ಳಿ ವಿತ ನೀರಾವರಿ ಯೋಜನೆ ಕುರಿತು

489 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ತಾಲ್ಲೂಕು ಮಡಕಿಹೊನ್ನಳ್ಳಿ ವಿತ ನೀರಾವರಿ ಯೋಜನೆ ಮಂಜೂರು ಮಾಡಲಾಗಿದೆಯೇ?

ಆ) ಮಾಡಿದ್ದಲ್ಲಿ ಎಷ್ಟು ಎಕರೆಗೆ ನೀರಾವರಿ ಒದಗಿಸಲಾಗುವುದು?

ಇ) ಆ ಕೆಲಸಕ್ಕೆ 1993-94ರಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ ಹಾಗೂ ಆ ಯೋಜನೆ ಯಾವಾಗ ಮುಗಿಯುತ್ತದೆ?

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಮೂಡಬಿದರೆಯಲ್ಲಿ ವಿದ್ಯುತ್ ತೊಂದರೆ ಉಂಟಾಗಿರುವ ಬಗ್ಗೆ

580 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಬಿದರೆಯಲ್ಲಿ ಸಬ್-ಸ್ಟೇಷನ್ ಆದ ಬಳಿಕ ವಿದ್ಯುತ್ತಿನ ಸರಬರಾಜಿನಲ್ಲಿ ತೊಂದರೆಯಾಗಲು ಕಾರಣವೇನು?

ಆ) ಅಲ್ಲಿಗೆ ಬೇಕಾದ ಟ್ರಾನ್ಸ್‌ಫಾರ್ಮರ್ಗಳನ್ನು ಯಾವಾಗ ಒದಗಿಸಲಾಗುವುದು ಮತ್ತು ನೌಕರರನ್ನು ಯಾವಾಗ ಒದಗಿಸಲಾಗುವುದು?